**ಸಾಕ್ಷಿಗೆ ದಿನಾಂಕಃ 16.12.2025 ರಂದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎ.ಎಲ್.ಎಸ್. ವಕೀಲರಿಂದಃ**

ನಾನು ಎಸ್.ಎಸ್.ಎಲ್.ಸಿ.ಯವರೆಗೆ ಓದಿರುತ್ತೇನೆ. ನಾನು ಹಾಜರುಪಡಿಸಿದ ದಾಖಲೆಗಳನ್ನು ನಮ್ಮ ವಕೀಲರಿಗೆ ನಾನೇ ನೀಡಿರುತ್ತೇನೆ. ನಿ.ಪಿ.4 ರಲ್ಲಿರುವ ಸಿದ್ದಪ್ಪ ಬಿನ್ ಬೋಳಿ ಯಾರು ಎಂದು ನನಗೆ ಗೊತ್ತಿರುವುದಿಲ್ಲ. ನಿ.ಪಿ.4 ನ್ನು ನಾನು ಹಾಜರುಪಡಿಸಿರುವುದಿಲ್ಲ. ನಿ.ಪಿ.4 ಕ್ಕೂ ನಮ್ಮ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲದೆ ಇದ್ದರೂ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸುವ ಮೊದಲು ನಮ್ಮ ವಕೀಲರ ಮೂಲಕ ಪ್ರತಿವಾದಿಗಳಿ ನೋಟಿಸನ್ನು ನೀಡಲು ತೊಂದರೆ ಇರಲಿಲ್ಲ. ನೋಟಿಸನ್ನು ನೀಡದರೆ 3 ನೇ ಪ್ರತಿವಾದಿಯು ಪ್ರತ್ಯುತ್ತರ ನೀಡುತ್ತಾರೆ ಎನ್ನುವ ಕಾರಣದಿಂದ ನೋಟಿಸನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ರಾಜಶೇಖರ ವ್ಯವಸಾಯವನ್ನು ಹೊರತುಪಡಿಸಿ ಬೇರೆ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ. ನಿ.ಪಿ.5 ಮತ್ತು 6 ರಂತೆ ಖಾತೆ 3 ನೇ ಪ್ರತಿವಾದಿಯ ಹೆಸರಿನಲ್ಲಿದ್ದು, ಯಾವ ಆಧಾರದ ಮೇಲೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 3 ನೇ ಪ್ರತಿವಾದಿಯು ಖಾತೆಗಾಗಿ ಸಲ್ಲಿಸಿದ ಅರ್ಜಿಯನ್ನು ಹಾಜರುಪಡಿಸಿರುವುದಿಲ್ಲ. ನಿ.ಪಿ.2 ಮತ್ತು 3 ರಂತೆ 2 ನೇ ಪ್ರತಿವಾದಿಯ ಹೆಸರಿಗೆ ಯಾವ ಆಧಾರದ ಮೇಲೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 2 ನೇ ಪ್ರತಿವಾದಿಯು ಖಾತೆಗಾಗಿ ಸಲ್ಲಿಸಿದ ಅರ್ಜಿಯನ್ನು ಹಾಜರುಪಡಿಸಿರುವುದಿಲ್ಲ. ನಿ.ಪಿ.1 ನ್ನು ನಮ್ಮ ತಂದೆ ಯಾವ ಆಧಾರದ ಮೇಲೆ ಮಾಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಿ.ಪಿ.1 ನ್ನು ನಾನು ನೋಡಿರುವುದಿಲ್ಲ ಮತ್ತು ಓದಿರುವುದಿಲ್ಲ.

ನಮ್ಮ ತಂದೆಯು ಗ್ರಾಮಲೆಕ್ಕಾಧಿಕಾರಿ ಮತ್ತು ರಾಜಸ್ವ ನಿರೀಕ್ಷಕರ ಸಮಕ್ಷಮ 2 ಮತ್ತು 3 ನೇ ಪ್ರತಿವಾದಿಗಳಿಗೆ ಒಪ್ಪಿಗೆ ವರದಿಯ ಆಧಾರದ ಮೇಲೆ ಖಾತೆ ಮಾಡಿಸಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ದಾವಾ ಸ್ವತ್ತಿನಲ್ಲಿ ಸಾಗುವನಿ, ಸಿಲ್ವರ್ ಗಿಡ ಮತ್ತು ತೆಂಗಿನ ಮರ ಇರುತ್ತದೆ. 1 ನೇ ದಾವಾ ಸ್ವತ್ತನ್ನು ನಮ್ಮ ತಂದೆ ನನಗೆ ದಾನ ಕೊಡಲು ಸಿದ್ದರಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಉಳಿದ ಸ್ವತ್ತುಗಳಿಗೆ ಸಮಪಾಲು ಬರಬೇಕೆಂದು ಕೇಳಿರುತ್ತೇನೆ ಎಂದು ನುಡಿದಿರುತ್ತಾರೆ. ನಮ್ಮ ಕುಟುಂಬದಲ್ಲಿ ಬರವಣಿಗೆಯ ಮೂಲಕ ವಿಭಾಗ ಪತ್ರ ಆಗಿರುವುದಿಲ್ಲ.

ಸರ್ವೆ ನಂ.15/3 ರಲ್ಲಿ 1 ಎಕರೆ 11 ಗುಂಟೆ ನಮ್ಮ ತಂದೆಯ ಹೆಸರಿನಲ್ಲಿ ಖಾತೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.15/3 ರಲ್ಲಿ 1 ಎಕರೆ 3 ಗುಂಟೆ ನಮ್ಮ ತಂದೆಯ ಹೆಸರಿನಲ್ಲಿ ಖಾತೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.175/1 ರಲ್ಲಿ 1 ಎಕರೆ 5 ಗುಂಟೆ ನಮ್ಮ ತಂದೆಯ ಹೆಸರಿನಲ್ಲಿ ಖಾತೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.137/5 ರಲ್ಲಿ 7 ಗುಂಟೆ ನಮ್ಮ ತಂದೆಯ ಹೆಸರಿನಲ್ಲಿ ಖಾತೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಸ್ವತ್ತುಗಳು ನಮ್ಮ ತಂದೆಯ ಸ್ವಯಾರ್ಜಿತ ಸ್ವತ್ತುಗಳು ಎಂದು ನುಡಿದಿರುತ್ತಾರೆ. ಸರ್ವೆ ನಂ.67/4 ರಲ್ಲಿ 11 ಗುಂಟೆ ನಮ್ಮ ತಂದೆಗೆ ಪಿತ್ರಾರ್ಜಿತ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು ನಮ್ಮ ತಂದೆ ಮಹದೇವಮ್ಮ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.137/5 ರಲ್ಲಿ ಇರುವ 7 ಗುಂಟೆಯನ್ನು ನಮ್ಮ ತಂದೆ ರಾಜಯ್ಯ ಬಿನ್ ಸಿದ್ದಯ್ಯ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.175/1 ರಲ್ಲಿರುವ 15 ಗುಂಟೆಯನ್ನು ನಮ್ಮ ತಂದೆ ಎಂ.ರಾಜಪ್ಪ ಬಿನ್ ಮಹಂತದೇವರು ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಖರೀದಿದಾರರ ವಿರುದ್ಧ ಈ ದಾವೆಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ಸರ್ವೆ ನಂ.142/4 ರಲ್ಲಿ 32 ಗುಂಟೆ ನಮ್ಮ ತಂದೆಗೆ ಪಿತ್ರಾರ್ಜಿತ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ನೆರಗ್ಯಾತನಹಳ್ಳಿಯಲ್ಲಿ ಮಂಗಳೂರು ಹೆಂಚಿನ ಮನೆ ಇರುತ್ತದೆ ಎಂದರೆ ಸರಿ. ಸದರಿ ಮನೆಯು ಸರ್ವೆ ನಂ.15/3 ರಲ್ಲಿ ಬರುತ್ತದೆ ಎಂದರೆ ಸರಿ ಹಾಗೂ ಸದರಿ ಮನೆಯಲ್ಲಿ 3 ನೇ ಪ್ರತಿವಾದಿಯು ವಾಸವಿರುತ್ತಾರೆ ಎಂದರೆ ಸಾಕ್ಷಿಯು 2 ಮತ್ತು 3 ನೇ ಪ್ರತಿವಾದಿಯು ವಾಸವಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ.

ನನ್ನ ವಾದ ಪತ್ರದಲ್ಲಿ ನಮ್ಮ ತಂದೆಗೆ ಸ್ವಯಾರ್ಜಿತ ಸ್ವತ್ತುಗಳು ಇರುವ ಬಗ್ಗೆ ಹೇಳಿರುವುದಿಲ್ಲ. ಸರ್ವೆ ನಂ.15/3 ನ್ನು ನಮ್ಮ ತಂದೆಯು ಒಟ್ಟು ಕುಟುಂಬದ ಆದಾಯದಿಂದ ಕ್ರಯಪತ್ರದ ಮೂಲಕ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆಯು ಬೇರೆ ಸ್ವತ್ತುಗಳನ್ನು ಮಾರಾಟ ಮಾಡಿ ದಾವಾ ಸ್ವತ್ತುಗಳನ್ನು ಮತ್ತು 3 ನೇ ಪ್ರತಿವಾದಿ ಪ್ರತಿವಾದ ಪತ್ರದಲ್ಲಿ ನಮೂದು ಮಾಡಿರುವ ಸ್ವತ್ತುಗಳನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳಲ್ಲಿ ನನಗೆ ಮತ್ತು ಪ್ರತಿವಾದಿಗಳಿಗೆ ತಲಾ ¼ ಭಾಗ ಇರುತ್ತದೆ ಎಂದರೆ ಸಾಕ್ಷಿಯು ನಾನು ಪಿತ್ರಾರ್ಜಿತ ಸ್ವತ್ತುಗಳನ್ನು ಮಾತ್ರ ದಾವಾ ಪತ್ರಗಳಲ್ಲಿ ನಮೂದು ಮಾಡಿದ್ದು, ಪ್ರತಿವಾದ ಪತ್ರದಲ್ಲಿ ನಮೂದು ಮಾಡಿರುವ ಸ್ವತ್ತುಗಳು ನನಗೆ

ಗೊತ್ತಿರುವುದಿಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಮತ್ತು 1 ಮತ್ತು 2 ನೇ ಪ್ರತಿವಾದಿಗಳು ಒಂದು ಕಡೆ ಇದ್ದು,3 ನೇ ಪ್ರತಿವಾದಿಗಳು ಒಂದು ಕಡೆ ಇರುತ್ತಾರೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**1 ನೇ ಮತ್ತು 2 ನೇ ಪ್ರತಿವಾದಿಗಳ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**